**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರು ನಿಯಮ 330ರಡಿ ಕೋರಿರುವ ಗಮನ ಸೆಳೆಯುವ ಸೂಚನೆ**

**<u>ಸೂಚನೆ:-</u>**

ಕಲ್ಯಾಣ ಕರ್ನಾಟಕದಲ್ಲಿ 6 ಲಕ್ಷಕ್ಕೂ ಹೆಚ್ಚು ಬೆಸ್ತ, ಕೋಲಿ, ಕಬ್ಬಲಿಗರ ಜನಸಂಖ್ಯೆ ಇದ್ದು ಬಡತನ ರೇಖೆಗಿಂತ ಕೆಳಗಿರುವವರು ಶೇಕಡಾ 90 ರಷ್ಟು ಜನರು ಕಲ್ಯಾಣ ಕರ್ನಾಟಕದವರಾಗಿದ್ದು ಕಲಬುರಗಿಯಲ್ಲಿ ಈ ಸಮುದಾಯಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ವಿದ್ಯಾರ್ಥಿ ನಿಲಯ, ಶಾಲಾ ಕಾಲೇಜುಗಳ ಸ್ಥಾಪನೆಯ ಅವಶ್ಯಕತೆಯಿದ್ದು ಈ ಉದ್ದೇಶಕ್ಕೆ ಕಲಬುರಗಿಯಲ್ಲಿ 10 ಎಕರೆ ಜಮೀನು ಮಂಜೂರು ಮಾಡಿ ಈ ವರ್ಗದ ಏಳಿಗೆಗೆ ನಮ್ಮ ಸರ್ಕಾರ ಶ್ರಮಿಸಬೇಕಾಗಿರುವುದರಿಂದ ನಮ್ಮ ಗಂಗಾಮತ ಸಮಾಜಕ್ಕೆ 10 ಎಕರೆ ಜಮೀನು ಕಲಬುರಗಿಯಲ್ಲಿ ಮಂಜೂರು ಮಾಡುವ ಬಗ್ಗೆ.

**ಹೇಳಿಕೆ:-**

ಕಲ್ಯಾಣ ಕರ್ನಾಟಕದ ಕಲಬುರಗಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಬೆಸ್ತ, ಕೋಲಿ, ಕಬ್ಬಲಿಗರ ಹಾಗೂ ಗಂಗಾಮತ ಸಮುದಾಯಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ವಿದ್ಯಾರ್ಥಿ ನಿಲಯ, ಶಾಲಾ ಕಾಲೇಜುಗಳ ಸ್ಥಾಪನೆ ಉದ್ದೇಶಕ್ಕೆ 10 ಎಕರೆ ಜಮೀನು ಮಂಜೂರಿಸುವ ಕುರಿತು ಇದುವರೆವಿಗೂ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ:ಆರ್‌ಡಿ 49 ಎಲ್‌ಜಿಜಿ 2024**

**(ಕೃಷ್ಣಬೈರೇಗೌಡ)**
ಕಂದಾಯ ಸಚಿವರು